## ಪಠಣ ಕುತೂಹಲ



**ಎಂ.ಎಸ್. ಶ್ರೀರಾಮ್**

ಕತೆಗಾರ, ಪ್ರಬಂಧಕಾರ, ಅರ್ಥತಜ್ಞ ಶ್ರೀರಾಮ್ ಬೆಂಗಳೂರಿನವರು. ಸದ್ಯ ಬೆಂಗಳೂರಿನ ಐಐಎಂನಲ್ಲಿ ಬೋಧಕರು. 'ಶನಿವಾರ ಸಂತೆ', 'ಕನಸು ಕಟ್ಟುವ ಕಾಲ', 'ತೇಲ್ ಮಾಲಿಶ್', 'ಅವರವರ ಸತ್ಯ', 'ಮಾಯಾದರ್ಪಣ', 'ಸಲ್ಮಾನ್ ಖಾನ್‌ನ ಡಿಫಿಕಲ್ಟೀಸು' ಅವರ ಪ್ರಮುಖ ಪುಸ್ತಕಗಳು. 'ಬೇಟೆಯಲ್ಲ ಆಟವೆಲ್ಲ' ಕಾದಂಬರಿ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ವೈ.ವಿ.ರೆಡ್ಡಿ ಯವರ ಆತ್ಮಕಥನದ ಕನ್ನಡ ನಿರೂಪಣೆ 'ಭಿನ್ನ ಅಭಿಪ್ರಾಯ' ಶ್ರೀರಾಮ್ ಅವರ ಇತ್ತೀಚಿನ ಬಹುಚರ್ಚಿತ ಕೃತಿಗಳು.

# ನಮ್ಮ ಕಾಲಕ್ಕೆ ಕನ್ನಡಿ

ಹಲವು ವರ್ಷಗಳ ಹಿಂದೆ ಅಹಮದಾಬಾದಿನಲ್ಲಿದ್ದಾಗ ಸಾಬರಮತಿ ಆಶ್ರಮಕ್ಕೆ ಕೆಲವು ಅತಿಥಿಗಳನ್ನು ಕರೆದೊಯ್ದಿದ್ದೆ. ಆಗ ಮಹಾತ್ಮ ಗಾಂಧಿಯ ಬಗೆಗಿನ ವ್ಯಂಗ್ಯಚಿತ್ರಗಳ ಸಂಕಲನ 'Gandhi in Cartoons' ಕಂಡು, ಅದರ ಹಲವು ಪ್ರತಿಗಳನ್ನು ಕೊಂಡು ತಂದಿದ್ದೆ. ಗಾಂಧಿಯ ಬಗ್ಗೆ ಅವರ ಕಾಲದಲ್ಲಿ ರಚಿಸಿದ್ದ ವ್ಯಂಗ್ಯಚಿತ್ರಗಳು ಗಾಂಧಿಯನ್ನು ಲಘುಧಾಟಿಯಲ್ಲಿ ನೋಡುವ ಅವಕಾಶವನ್ನು ಒದಗಿಸಿಕೊಟ್ಟಿದ್ದವು. ಗಾಂಧಿಯ ಅನುಯಾಯಿಗಳು ನಡೆಸುತ್ತಿದ್ದ ಆಶ್ರಮದಲ್ಲಿ ಅವರೇ ಸ್ಥಾಪಿಸಿದ್ದ 'ನವಜೀವನ ಪ್ರಕಾಶನಾಲಯ'ದಿಂದ ಪ್ರಕಟಗೊಂಡಿದ್ದ ಆ ಪುಸ್ತಕ ಆರೋಗ್ಯಪೂರ್ಣ ಟೀಕೆಯನ್ನು ಹೇಗೆ ಸ್ವೀಕರಿಸಬಹುದು ಎನ್ನುವುದಕ್ಕೆ ಉದಾಹರಣೆಯೆಂದು ಆಗ ನನಗನ್ನಿಸಿತ್ತು. ಮೂರು ವರ್ಷಗಳ ಹಿಂದೆ ಅಂಬೇಡ್ಕರ್ ಬಗೆಗಿನ ವ್ಯಂಗ್ಯಚಿತ್ರಗಳನ್ನು ಕಲೆಹಾಕಿ – ಪ್ರತಿ ವ್ಯಂಗ್ಯಚಿತ್ರ ಸಂದರ್ಭದ ಟಿಪ್ಪಣಿ ಮತ್ತು ಅದರ ಅರ್ಥದ ಪದರಗಳನ್ನು ಚರ್ಚಿಸುವ ಪುಸ್ತಕ 'No Laughing Matter: The Ambedkar Cartoons 1932–1956' ಕೃತಿ 'ನವಯಾನ' ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ವ್ಯಂಗ್ಯಚಿತ್ರಗಳನ್ನು ಆಯ್ದು ಟಿಪ್ಪಣಿ ಮಾಡಿರುವವರು ಉನ್ನಮತಿ ಶ್ಯಾಮ್ ಸುಂದರ್. ಈ ಪುಸ್ತಕವನ್ನು ಕಂಡಾಗ ವ್ಯಂಗ್ಯ ಎಲ್ಲಿಂದ ಬರುತ್ತದೆ, ಅದು ಯಾರಲ್ಲಿ ನಗೆಯನ್ನು ತರಿಸುತ್ತಲೇ ಯಾರನ್ನು ಅಪಮಾನಿಸಬಹುದು ಎನ್ನುವ ಪ್ರಶ್ನೆಗಳು ಉದ್ಭವವಾದವು. ಕುಹಕಕ್ಕೂ ವ್ಯಂಗ್ಯಕ್ಕೂ ಇರುವ ಅಂತರದ ಪದರಗಳನ್ನು ಬಿಡಿಸುತ್ತಲೇ ಆಗಿನ ಸಂದರ್ಭದ ರಾಜಕೀಯ, ಸಂವಾದದ ಭಾಷೆ, ಅದರಲ್ಲಿ ಕಂಡುಬರಬಹುದಾದ ಅಂತರ ಎಲ್ಲವನ್ನೂ ನಮ್ಮ ಮುಂದೆ ಈ ಪುಸ್ತಕ ಬಿಡಿಸಿಡುತ್ತದೆ. ಹೀಗೆ ವ್ಯಂಗ್ಯಚಿತ್ರಗಳ ಮೂಲಕವೂ ನಮ್ಮಲ್ಲಿರಬಹುದಾದ ಪೂರ್ವಗ್ರಹ ಮತ್ತು ಜಾತೀಯತೆಯನ್ನು ಪ್ರಶ್ನಿಸಿಕೊಳ್ಳಲು ಈ ಪುಸ್ತಕ ಪ್ರೇರೇಪಿಸುತ್ತದೆ.